# ಕಾಂಬಿನೇಷನ್ ಆಭರಣ

ಒಂದೇ ಒಡವೆಯನ್ನು ನಿತ್ಯಕ್ಕೂ, ಮದುವೆ, ಮುಂಜಿ ಮುಂತಾದ ಸಮಾರಂಭಗಳಿಗೂ, ಸಂಜೆಯ ಪಾರ್ಟಿಗೂ ಹಾಕಲು ಬರುವುದಿಲ್ಲ. ಇದಕ್ಕಾಗಿ ನಮ್ಮಲ್ಲಿ ಇದ್ದ ಆಭರಣಗಳಲ್ಲೇ ಕಾಂಬಿನೇಷನ್ ಮಾಡಿ ಇಟ್ಟುಕೊಂಡರೆ ಆಯಾ ಸಂದರ್ಭಕ್ಕೆ ತಕ್ಕಂತೆ ಫ್ಯಾಷನಬಲ್ ಆಗಿಯೂ ಕಾಣುವಂತೆ ಧರಿಸಿಕೊಳ್ಳಬಹುದು.

■ ಕೃಷ್ಣವೇಣಿ ಪ್ರಸಾದ್ ಮುಳಿಯ
ಚಿತ್ರ: ಮುಳಿಯ ಕೇಶವ ಭಟ್ & ಸನ್ಸ್



ಮಹಿಳೆಯರ ಒಡವೆ ಮೋಹ ಇಂದು ನಿನ್ನೆಯದಲ್ಲ. ಆಯಾ ಕಾಲಕ್ಕೆ, ಕಾರ್ಯಕ್ರಮಕ್ಕೆ ತಕ್ಕಂತೆ ಒಡವೆ ಧರಿಸಿಕೊಳ್ಳುವುದರಲ್ಲಿ ಮಹಿಳೆಯರಿಗೆ ಅದೇನೋ ಖುಷಿ, ಸಂತೃಪ್ತಿ.

ಇತ್ತೀಚಿನ ಹೊಸ ಬೆಳವಣಿಗೆ ಎಂದರೆ ಹೆಣ್ಣುಮಕ್ಕಳು ಮಾತ್ರವಲ್ಲದೆ ಇವರ ಅಪ್ಪಂದಿರಿಗೂ ಆಭರಣ ಮೇಲೆ ಮೋಹ ಶುರುವಾಗಿದೆ. ಕಾರಣ ಮಗಳಿಗೆ ಮದುವೆ ಸಂದರ್ಭದಲ್ಲಿ ತನ್ನ ಕೈಲಾದಷ್ಟು ಒಡವೆ ಮಾಡಿಸಿ ಹಾಕಿದರೆ ಆಕೆಗೆ ಜೀವನದಲ್ಲಿ ಆಪದ್ಧನವಾಗಿಯೂ ಇರುತ್ತದೆ, ಇದು ಕಷ್ಟಕಾಲದಲ್ಲಿ ಸಹಾಯಕ್ಕೆ ಬರುತ್ತದೆ ಎಂಬ ಅಭಿಲಾಷೆ.

ಈ ಆಭರಣವನ್ನು ಯಾವ ರೀತಿಯಾಗಿ ಕಾಂಬಿನೇಷನ್ ಮಾಡಬಹುದು? ನಮ್ಮಲ್ಲಿರುವ ಬಜೆಟ್ ಎಷ್ಟು? ಇದರ ಮೇಲೆ ಆಭರಣ ಕಾಂಬಿನೇಷನ್ ನಿರ್ಧಾರ ಮಾಡುವುದು ಒಳಿತು.

- ನಿತ್ಯ ಬಳಕೆಗೆ (ಅಗತ್ಯದ್ದು)
- ಅಲಂಕಾರಕ್ಕೆ
- ಸಮಾರಂಭಗಳಿಗೆ
- ನಿತ್ಯ ಬಳಕೆಗೆ ಸ್ಟೈಲಿಷ್ ಆಭರಣ

ಯುವತಿಯರಿಗೆ ಮನದ ಕೆಲವು ಬಯಕೆಗಳು ಸಹಜ. ಸಮಾಜದಲ್ಲಿ ಜನರೊಂದಿಗೆ ಬೆರೆಯುವಾಗ ತನ್ನನ್ನು ತಾನು ಗುರುತಿಸಿಕೊಳ್ಳಬೇಕು. ತಾನು ಎಲ್ಲರೊಂದಿಗೆ ಸರಿ ಸಮಾನವಾಗಿರಬೇಕು. ಆಭರಣ, ಬಟ್ಟೆ, ಚಪ್ಪಲು ಇದು ಮಹಿಳಾ ಮಣಿಯರ ಪ್ರೀತಿಯ ವಸ್ತುಗಳು. ಎಲ್ಲರಂತೆ ನಾವು ಹೇಗೆ ಆಭರಣ ಧರಿಸಬೇಕು. ಸ್ಟೈಲಿಶ್ ಆಗಿ ಸುಂದರವಾಗಿ ಕಾಣುವಂತೆ ನಿತ್ಯ ಬಳಕೆಗೆ ಒಂದಿಷ್ಟು ಆಭರಣ ಬೇಕು. ಅದನ್ನು ಆರಿಸೋದು ಹೇಗೆ?

ಕಿವಿಯೋಲೆ ಹೆಣ್ಮಕ್ಕಳಿಗೆ ಭೂಷಣ, ಕತ್ತಲ್ಲಿ ಒಂದೆಳೆ ಸರ ಅದಕ್ಕೊಂದು ಚಿಕ್ಕ ಪೆಂಡೆಂಟ್, ಕೈ ಬಳೆ ಒಂದು ಕೈಗಾದರೆ ಮುಂಗೈ ಸರಪಳಿ ಒಂದು ಕೈಗಿರಲಿ. ಉಂಗುರ ಇದ್ದರೆ ಸೊಗಸು. ಅವರವರ ಶಕ್ತಿ ಅನುಸಾರ ಕಿವಿಯೋಲೆ ಆದಾದ ಮೇಲೆ ಕುತ್ತಿಗೆಗೆ ಸರ ಇರಲಿ ಅನಂತರ ಬಳೆ, ಉಂಗುರ. ಮೊದಲು ಕಣ್ಣಿಗೆ ಕಿವಿಯೋಲೆ ಕಾಣೋದು ಅನಂತರ ಕುತ್ತಿಗೆಯ ಸರ. ಬಳೆಗೆ ಸ್ವಲ್ಪ ಮಟ್ಟಿಗೆ ಮೌಲ್ಯ ಜಾಸ್ತಿ ಬೇಕಾಗುವುದರಿಂದ ಅನಂತರದ ಬಜೆಟ್‌ನಲ್ಲಿ ಇರಲಿ. ಉಂಗುರ ಸಾಧಾರಣ ಏನಾದರೂ ಸಾಧನೆ ಮಾಡಿದಾಗ ಉಡುಗೊರೆಯಾಗಿ ನೀಡಬಹುದು ಜೊತೆಗೆ ಕಡಿಮೆ ಮೌಲ್ಯ ಸಾಕು. ನಾವು ಶೇಖರಣೆ ಮಾಡಿದ ಹಣಕ್ಕೆ ಒಂದಷ್ಟು ಸೇರಿಸಿದರೆ ತೆಗೆದುಬಿಡಬಹುದು. ಈ ಆಭರಣಗಳು ಅಗತ್ಯತೆಗೆ ಸಂಬಂಧಿಸಿದ್ದಾಗಿದೆ.

### ಅಲಂಕಾರಕ್ಕೆ

ಸಾಮಾನ್ಯವಾಗಿ ದಿನಕ್ಕೊಂದು ಒಡವೆ ಹಾಕಿ ಸಂಭ್ರಮಿಸುವ ಹೆಣ್ಮಕ್ಕಳೇ ಹೆಚ್ಚು. ಆಗ ಯಾವ ಆಭರಣಕ್ಕೆ ಪ್ರಾಶಸ್ತ್ಯ ನೀಡಬೇಕು. ನಿತ್ಯ ಬಳಕೆಯ ಆಭರಣಗಳು ಸದೃಢವಾಗಿ ಇರಬೇಕು. ಅಲಂಕಾರಕ್ಕೆ ಒಲವು ತೋರಿದಾಗ ಮೊದಲು ಕೇವಲ ಚಿನ್ನದ ಆಭರಣ ಆದ ಮೇಲೆ ಮುತ್ತು ( ಬಿಳಿ ಮುತ್ತು ಕ್ರೀಮ್) ನ ಆಭರಣ ಖರೀದಿಸಬಹುದು ಏಕೆಂದರೆ ಈ ಆಭರಣ ಸಾಧಾರಣ ಎಲ್ಲಾ ಉಡುಪುಗಳಿಗೆ ಹೊಂದಿಕೊಂಡು ಸೊಗಸಾಗಿ ಕಾಣುತ್ತದೆ.

### ಹಣ ಹೊಂದಿಸುವುದು ಹೇಗೆ?

ಆಭರಣಕ್ಕೆ ಹಣ ಹೇಗೆ ಹೊಂದಿಸಿಕೊಳ್ಳೋದು ತಿಂಗಳಿಗೆ ಇಂತಿಷ್ಟು ಹಣವನ್ನು ಎತ್ತಿಟ್ಟು ಅದನ್ನ ಚಿನ್ನದ ರೂಪದಲ್ಲೇ ಶೇಖರಿಸುವ ವಿಧಾನ ಈಗ ಪ್ರಸ್ತುತ ಮಾರುಕಟ್ಟೆ ಅಂಗಡಿಗಳಲ್ಲಿ ಚಾಲ್ತಿಯಲ್ಲಿದೆ. ಆಗ ಖರ್ಚಾಗದೇ ಉಳಿಯುತ್ತದೆ. ಬೋನಸ್ ಸಿಕ್ಕಾಗ, ಉಡುಗೊರೆಯಾಗಿ ಸಿಕ್ಕ ಹಣ, ಕೃಷಿಕರಾದ್ರೆ ಜೀವನಕ್ಕಲ್ಲದೆ ಬೆಳೆದ ಉಳಿದ ಧವಸ ಧಾನ್ಯಗಳನ್ನು ಮಾರಿದ ಹಣ, ಕೂಡಿಟ್ಟ ಹಣ ಹೀಗೆ ಸಣ್ಣ ಸಣ್ಣ ಮೊತ್ತವನ್ನು ಒಟ್ಟು ಮಾಡಿ ಖರೀದಿಸಿದರೆ ಅದರಿಂದ ಸಿಗುವ ತೃಪ್ತಿಯೇ ಬೇರೆ. ಹೀಗೆ ಶೇಖರಿಸಿದ ಹಣದಿಂದ ಖರೀದಿಸಿದ ಚಿನ್ನವನ್ನು ಕಷ್ಟ ಕಾಲ ಬಂದಾಗ ವಿಕ್ರಯಿಸಬಹುದು.